**ಪಾಠ-9** **ಫೆಬ್ರವರಿ 20-26**

# ಸೇವೆ ಮಾಡಲು ಮತ್ತು ರಕ್ಷಿಸಲು



**ಸಬ್ಬತ್ತಿನ ಮಧ್ಯಾಹ್ನ : ಈ ವಾರದ ಪಾಠದ ಅಧ್ಯಯನಕ್ಕಾಗಿ ಓದಿರಿ :** ಯೆಶಾಯ 41, ಯೆಶಾಯ 42:1–7, ಯೆಶಾಯ 44:26–45, ಯೆಶಾಯ 49:1–12.

**ಸ್ಮರಣವಾಕ್ಯ : "ಇಗೋ, ನನ್ನ ಸೇವಕನು! ಇವನಿಗೆ ನಾನೇ ಆಧಾರ; ಇವನು ನನಗೆ ಇಷ್ಟನು, ನನ್ನ ಪ್ರಾಣಪ್ರಿಯನು. ಇವನಲ್ಲಿ ನನ್ನ ಆತ್ಮವನ್ನು ಇರಿಸಿದ್ದೇನೆ; ಇವನು ಅನ್ಯಜನಗಳಲ್ಲಿಯೂ ಸದ್ಧರ್ಮವನ್ನು ಪ್ರಚುರಪಡಿಸುವವನು"** (ಯೆಶಾಯ 42:1).

ಅನೇಕರು ಯೇಸುಕ್ರಿಸ್ತನು ಜೀವಿಸಿದ ಸ್ಥಳ, ಅವನು ನಡೆದಾಡಿದ ದಾರಿ, ಉಪದೇಶಮಾಡಿದ ಸಮುದ್ರತೀರ, ಬೆಟ್ಟಗಳು ಗುಡ್ಡಗಳು ಮತ್ತು ಕಣಿವೆಗಳು ಇವೆಲ್ಲವನ್ನು ಸಂದರ್ಶಿಸುವುದು ಒಂದು ವಿಶೇಷವಾದ ಭಾಗ್ಯವೆಂದು ಭಾವಿಸುತ್ತಾರೆ. ಆದರೆ ನಾವು ಯೇಸುಕ್ರಿಸ್ತನು ಹೆಜ್ಜೆಹಾಕಿದ ಸ್ಥಳಗಳಲ್ಲಿ ಹೆಜ್ಜೆಹಾಕುವುದಕ್ಕೆ ನಜರೇತಿಗೆ, ಹೋಗಬೇಕಾದ ಅಗತ್ಯವಿಲ್ಲ ಕಪರ್ನೌಮಿಗೆ ಇಲ್ಲವೇ ಬೇಥಾನ್ಯಕ್ಕೆ ಹೋಗಬೇಕಾದ ಅಗತ್ಯವಿಲ್ಲ. **"ಆತನ ಪಾದಗಳ ಗುರುತನ್ನು ಅಸ್ವಸ್ಥರ ಹಾಸಿಗೆಯ ಪಕ್ಕದಲ್ಲಿ ಬಡವರ ಜೋಪಡಿಗಳಲ್ಲಿ ದೊಡ್ಡಪಟ್ಟಣದ ಜನಜಂಗುಳಿಯ ಓಣಿಗಳಲ್ಲಿ ಮತ್ತು ಆದರಣೆಗಾಗಿ (ಸಂತೈಸುವಿಕೆಗಾಗಿ) ಹಂಬಲಿಸುವ ಪ್ರತಿಮನುಷ್ಯರ ಹೃದಯಗಳಲ್ಲಿ ನಾವು ಕಾಣಬಹುದು. ಯೇಸು ಕ್ರಿಸ್ತನು ಈ**

---

* ಈ ವಾರದ ಪಾಠವನ್ನು ಫೆಬ್ರವರಿ 27ರ ಸಬ್ಬತ್ತಿಗೆ ಅಧ್ಯಯನ ಮಾಡಿರಿ ಮತ್ತು ಸಿದ್ಧಪಡಿಸಿಕೊಳ್ಳಿರಿ.

**ಭೂಮಿಯಲ್ಲಿದ್ದಾಗ ಮಾಡಿದುದನ್ನುನಾವು ಮಾಡುವಾಗ ಕ್ರಿಸ್ತನ ಹೆಜ್ಜೆಜಾಡಿನಲ್ಲಿ ನಡೆದಿರುತ್ತೇವೆ"** – ಎಲೆನ್ ಜಿ ವೈಟಮ್ಮನವರ ದಿ ಡಿಸೈರ್ ಆಫ್ ಏಜಸ್ ಪುಸ್ತಕದಲ್ಲಿ 640ನೇ ಪುಟ.

ಯೆಶಾಯನು ಇದೇ ತೆರನಾದ ಕರುಣೆಯುಳ್ಳ ಸೇವೆಯನ್ನು ಮಾಡುವ ಕರ್ತನ ಸೇವಕನ ಬಗ್ಗೆ ಮಾತಾಡುತ್ತಾನೆ: "ಜಜ್ಜಿದ ದಂಟನ್ನು ಮುರಿದು ಹಾಕದೆ ಕಳಿಗುಂದಿದ ದೀಪವನ್ನು ನಂದಿಸದೆ ಸದ್ಧರ್ಮವನ್ನು ಪ್ರಚುರಪಡಿಸಿ ಸಿದ್ಧಿಗೆ ತರುವನು. ಲೋಕದಲ್ಲಿ ಸದ್ಧರ್ಮವನ್ನು ಸ್ಥಾಪಿಸುವತನಕ ಇವನು ಕಳೆಗುಂದದೆಯೂ ಜಜ್ಜಿಹೋಗದೆಯೂ ತನ್ನ ಕಾರ್ಯದಲ್ಲಿ ನಿರತನಾಗಿರುವನು... ನೀನು ಕುರುಡರಿಗೆ ಕಣ್ಣುಕೊಟ್ಟು ಬಂದಿಗಳನ್ನು ಸೆರೆಯಿಂದಲೂ ಕತ್ತಲಲ್ಲಿ ಬಿದ್ದವರನ್ನು ಕಾರಾಗೃಹದಿಂದಲೂ ಹೊರಗೆ ಕರತರಬೇಕು ಎಂದು ಯೆಹೋವನೆಂಬ ನಾನು ನನ್ನ ಧರ್ಮದ ಸಂಕಲ್ಪನುಸಾರವಾಗಿ ನಿನ್ನನ್ನು ಕರೆದು ಕೈಹಿಡಿದು ಕಾಪಾಡಿ ನನ್ನ ಜನರಿಗೆ ಒಡಂಬಡಿಕೆಯ ಆಧಾರವನ್ನಾಗಿಯೂ ಅನ್ಯಜನಗಳಿಗೆ ಬೆಳಕನ್ನಾಗಿಯೂ ನೇಮಿಸಿದ್ದೇನೆ" – ಯೆಶಾಯನು 42:3 ರಿಂದ 7.

ಈ ಸೇವಕನು ಯಾರು? ಈತನು ಏನನ್ನು ಸಿದ್ಧಿಗೆ ತರುವನು? ಈ ಸೇವಕನ ಬಗ್ಗೆ ನಮ್ಮ ಗಮನ ಹರಿಸೋಣ.

**ಭಾನುವಾರ** **ಫೆಬ್ರವರಿ 21**

## ಸೇವಕನಾದ ಇಸ್ರಾಯೇಲ್ (ಯೆಶಾಯ 41ನೇ ಅಧ್ಯಾಯ)

ಯೆಶಾಯ 41:8ರಲ್ಲಿ ದೇವರು ಇಸ್ರಾಯೇಲ್ ಕುರಿತು ಮಾತಾಡುತ್ತಾ "ನನ್ನ ಸೇವಕನಾದ ಇಸ್ರಾಯೇಲೇ" ಎಂದು ಕರೆಯುತ್ತಾನೆ, 42:1ರಲ್ಲಿ "ನನ್ನ ಸೇವಕನು" ಎಂಬುದಾಗಿ ಪರಿಚಯಿಸುತ್ತಾನೆ, ಈ ಸೇವಕನು ಯಾರು?

ಯಾಕೋಬ, ಇಸ್ರಾಯೇಲ್ ಎಂದು ಕರೆದಿರುವುದು ಇಸ್ರಾಯೇಲ್ಯರ ಮೂಲಪಿತೃವನ್ನೊ? ಇಸ್ರಾಯೇಲ್ಯ ಜನಾಂಗವನ್ನೊ? ಹೊಸ ಒಡಂಬಡಿಕೆಯ ಮೆಸ್ಸೀಯನನ್ನಾಗಿ, ಕ್ರಿಸ್ತನನ್ನಾಗಿ ಗುರುತಿಸುವ ಯೇಸುವನ್ನೊ?

ಯೆಶಾಯ 41 ರಿಂದ 53ನೇ ಅಧ್ಯಾಯಗಳು ಸೇವಕ ಎಂಬುದಕ್ಕೆ ಎರಡುತರದ ಉಲ್ಲೇಖಗಳನ್ನು ಎಣೆದುಕೊಂಡುಬಂದಿವೆ. ಒಂದು ಸೇವಕನಿಗೆ "ಇಸ್ರಾಯೇಲ್" ಅಥವಾ "ಯಾಕೋಬ್ಯ" ಎಂದು ಕರೆಯಲಾಗಿದೆ. ಯೆಶಾಯ 41:8, ಯೆಶಾಯ 44:1,2,21; ಯೆಶಾಯ 45:4 ಮತ್ತು ಯೆಶಾಯ 48:20 ವಚನಗಳಲ್ಲಿ ಹೀಗೆ ಮತ್ತು ಯೆಶಾಯ 48:20 ವಚನಗಳಲ್ಲಿ ಹೀಗೆ ಕರೆಯಲಾಗಿದೆ. ಯಾಕೆಂದರೆ ದೇವರು ವರ್ತಮಾನ ಕಾಲದಲ್ಲಿ ಇಸ್ರಾಯೇಲೇ, ಯಾಕೋಬೇ ಎಂದು ಸಂಬೋಧಿಸುತ್ತಿದ್ದಾನೆ. ಯಾಕೋಬೇ ಎಂದರೆ ಆತನಿಂದ ಉತ್ಪತ್ತಿಯಾದ ಜನಾಂಗ (ದೇಶ) ವೆಂಬುದು ಸ್ಪಷ್ಟವಾಗುತ್ತದೆ. ಬಾಬೆಲಿನಿಂದ ಹೊರಡಿರಿ... ಯೆಹೋವನು ತನ್ನ ಸೇವಕನಾದ ಯಾಕೋಬನನ್ನು ವಿಮೋಚಿಸಿದ್ದಾನೆಂದು ಹೇಳಿರಿ (ಯೆಶಾಯ 48:20) ಎಂಬ ವಚನಗಳು ಇದನ್ನು ಸಮರ್ಥಿಸುತ್ತವೆ.

ಇನ್ನಿತರೆ ಸಂದರ್ಭಗಳಲ್ಲಿ, ಉದಾಹರಣೆಗೆ ಯೆಶಾಯ 42:1; ಯೆಶಾಯ 50:10; ಯೆಶಾಯ 52:13 ಮತ್ತು ಯೆಶಾಯ 53:11 ಮುಂತಾದ ವಚನಗಳಲ್ಲಿ ದೇವರ ಸೇವಕನನ್ನು ಹೆಸರಿಸಲಾಗಿಲ್ಲ. ಪ್ರಥಮವಾಗಿ ಯೆಶಾಯ 42:1ರಲ್ಲಿ ಉಲ್ಲೇಖವಾಗಿದೆಯಾದರೂ ಈತನ ಗುರುತು ಕೂಡಲೇ ಸಿಕ್ಕಿದಂತೆ ತೋರುವುದಿಲ್ಲ. ಆದರೂ ಯೆಶಾಯನು ಮುಂದಿನ ಅಧ್ಯಾಯಗಳಲ್ಲಿ ಆತನ ಪರಿಚಯವನ್ನು ಮಾಡುತ್ತಾ ಹೋದಂತೆ ಈತನು ಒಬ್ಬ ವ್ಯಕ್ತಿ ಎನ್ನುವುದು ನಮಗೆ ಸ್ಪಷ್ಟದಾಗುತ್ತದೆ. ಈತನು ಇಸ್ರಾಯೇಲ್ ಜನಾಂಗವನ್ನು ದೇವರ ಬಳಿಗೆ ತಂದು ಅವರನ್ನು ಪುನರ್‌ಸ್ಥಾಪಿಸುತ್ತಾನೆ (ಯೆಶಾಯ 49:5,6), ಪಾಪಿಗಳಿಗಾಗಿ ಪ್ರಾಯಶ್ಚಿತ್ತ ಯಜ್ಞವಾಗಿ ಸಾಯುತ್ತಾನೆ (ಯೆಶಾಯ 52:13 ರಿಂದ 58:12 ರವರೆಗೆ) ಮತ್ತು ಯೆಶಾಯ 49:5,6ನ್ನು ಸಹಾ ನೋಡಿರಿ. ಆದುದರಿಂದ ಈತನು ಇಸ್ರಾಯೇಲ್ ಜನಾಂಗವನ್ನು ಸೂಚಿಸುವುದಿಲ್ಲ. ಆದುದರಿಂದ ಯೆಶಾಯನು ದೇವರು ಇಬ್ಬರು ಸೇವಕರ ಬಗ್ಗೆ ಮಾರಾಡುತ್ತಿದ್ದಾನೆ. ಒಬ್ಬ ಸೇವಕನು ಏಕವ್ಯಕ್ತಿಯಾಗಿದ್ದಾನೆ. ಇನ್ನೊಂದು ಇಡೀ ಜನಾಂಗವನ್ನೇ ಸೇವಕ ಎಂಬುದಾಗಿ ಕರೆಯುವುದು. ಸೇವಕನಾಗಿ ಇಸ್ರಾಯೇಲ್ ಜನರ ಪಾತ್ರವೇನು? (ಯೆಶಾಯ 41:8–20).

ದೇವರು ಇಸ್ರಾಯೇಲ್ ಜನಾಂಗಕ್ಕೆ ನೀವು ಈಗಲೂ ನನ್ನ ಸೇವಕ ಎಂದು ಖಾತ್ರಿಪಡಿಸುತ್ತಾ "**ನೀನು ನನ್ನ ಸೇವಕನು, ನಾನು ನಿನ್ನನ್ನು ಆರಿಸಿಕೊಂಡೆನು**

**ತಳ್ಳಲಿಲ್ಲ**" (ಯೆಶಾಯ 41:9). ನಂತರ ದೇವರು ಸತ್ಯವೇದದಲ್ಲಿರುವ ವಾಗ್ದಾನಗಳಲ್ಲಿ ಬಹಳ ಅತಿಶಯವಾದ ವಾಗ್ದಾನವನ್ನು ಇಸ್ರಾಯೇಲ್‌ಗೆ ಕೊಡುತ್ತಾನೆ. ನೀನಂತು ಹೆದರಬೇಡ, ನಾನೇ ನಿನ್ನೊಂದಿಗಿದ್ದೇನೆ; ದಿಗ್ಭ್ರಮೆಗೊಳ್ಳದಿರು, ನಾನೇ ನಿನ್ನ ದೇವರು, ನಾನು ನಿನ್ನನ್ನು ಬಲಪಡಿಸುತ್ತೇನೆ; ಹೌದು, ನಿನಗೆ ಸಹಾಯ ಮಾಡುತ್ತೇನೆ; ನನ್ನ ಧರ್ಮದ ಬಲಗೈಯನ್ನು ನಿನಗೆ ಆಧಾರ ಮಾಡುತ್ತೇನೆ" (ಯೆಶಾಯ 41:10). ಇದರಲ್ಲಿ ಮತ್ತು ನಂತರದ ವಚನಗಳಲ್ಲಿ ಇಸ್ರಾಯೇಲ್ಯ ಮುಖ್ಯವಾದ ಪಾತ್ರವೇನೆಂದರೆ ಅವರನ್ನು ದೇವರು ರಕ್ಷಿಸುವಂತೆ ನಂಬಬೇಕು (ಆದರೆ ರಾಜನಾದ ಅಹಾಜನು ಹಾಗೆ ಮಾಡಲಿಲ್ಲ). ಇತರರು ಅನ್ಯದೇವರುಗಳ ಮೇಲೆ ಮತ್ತು ಅವುಗಳ ವಿಗ್ರಹಗಳ ಮೇಲೆ ಭರವಸೆ ಇಡುವಂತೆ ಇಸ್ರಾಯೇಲ್ಯರು ಮಾಡಬಾರದು ಎಂಬುದೇ (ಯೆಶಾಯ 41:7, 21–24, 28,29).

ಯೆಶಾಯ 41:14ರಲ್ಲಿ ದೇವರು ಇಸ್ರಾಯೇಲ್ ದೇಶವನ್ನು ಕ್ರಿಮಿ ಎಂಬುದಾಗಿ ಕರೆಯುವುದನ್ನು ಗಮನಿಸಿ, ಇಲ್ಲಿ ಯಾವ ವಿಷಯವನ್ನು ಹೇಳುತ್ತಿದ್ದಾನೆ? ಇಡೀ ವಚನವನ್ನು ಓದಿದಾಗ ಒಳ್ಳೆಯ ಉತ್ತರ ಸಿಗುತ್ತದೆ. ನಾವು ಸಂಪೂರ್ಣವಾಗಿ ಕರ್ತನ ಮೇಲೆ ಅವಲಂಬನೆ ಮಾಡಿಕೊಳ್ಳುವ ಅವಶ್ಯಕತೆಯ ಬಗ್ಗೆ ನಮಗೆ ಇದು ಏನನ್ನು ಬೋಧಿಸುತ್ತದೆ?

**ಸೋಮವಾರ** **ಫೆಬ್ರವರಿ 22**

## ಅನಾಮಧೇಯ ಸೇವಕ (ಯೆಶಾಯ 42:1–7)

ದೇವರು ಆರಿಸಿಕೊಂಡು ತನ್ನ ಆತ್ಮವನ್ನು ಇರಿಸಿದ ಹೆಸರಿಲ್ಲದ ಸೇವಕನ ಪಾತ್ರ ಮತ್ತು ಗುಣಸ್ವಭಾವಗಳೇನು? (ಯೆಶಾಯ 42:1–7) ಉತ್ತಮವಾದ ಉತ್ತರವನ್ನು ಅಥವಾ ಉತ್ತರಗಳನ್ನು ಆಯ್ಕೆ ಮಾಡಿರಿ.

1. ಆತನು ಜನಾಂಗಗಳಿಗೆ ನ್ಯಾಯವನ್ನು ಒದಗಿಸುವನು (ಸದ್ಧರ್ಮವನ್ನು ಪ್ರಚುರಪಡಿಸುವನು).
2. ಆತನು ಕೂಗಾಡದೆ, ಆರ್ಭಟಿಸದೆ ಯಶಸ್ವಿಯಾಗಿ ತನ್ನ ಗುರಿಯನ್ನು ಸಾಧಿಸುತ್ತಾನೆ.

3. ಆತನು ಒಬ್ಬ ಬೋಧಕನು

4. ಆತನು ದೇವರು ಮತ್ತು ಜನಗಳ ಮಧ್ಯೆ ಒಡಂಬಡಿಕೆಯಾಗಿರುತ್ತಾನೆ.

5. ಆತನು ಕುರುಡರಿಗೆ ಕಣ್ಣುಕೊಟ್ಟು ಸೆರೆಯವರನ್ನು ಬಿಡಿಸಿ ಅವರಿಗೆ ಬೆಳಕನ್ನು ಅಥವಾ ನಿರೀಕ್ಷೆಯನ್ನು ಕೊಡುತ್ತಾನೆ.

6. ಮೇಲಿನ ಎಲ್ಲವೂ ಸರಿಯಾದ ಉತ್ತರಗಳು.

ಈ ಸೇವಕನ ಪಾತ್ರ ಮತ್ತು ಗುಣಲಕ್ಷಣಗಳನ್ನು ಇಷಯನ ಬುಡದಿಂದ ಒಡೆದ ಚಿಗುರು ಎಂದು ಕರೆಯಲ್ಪಟ್ಟಿರುವ, ಕರ್ತನ ಆತ್ಮವು ನೆಲಸಿರುವವನಿಗೆ ಹೇಗೆ ಹೋಲಿಕೆಯಾಗುತ್ತದೆ (ಯೆಶಾಯ 11)?

ಯೆಶಾಯ 42ನೇ ಅಧ್ಯಾಯದಲ್ಲಿರುವಂತೆ 11ನೇ ಅಧ್ಯಾಯದಲ್ಲಿರುವ ದಾವೀದ ವಂಶಕ್ಕೆ ಸೇರಿದ ಆಡಳಿತಗಾರನು ಸಹಾ ದೇವರ ಚಿತ್ತಾನುಸಾರವಾಗಿ ಕಾರ್ಯ ನಿರ್ವಹಿಸುತ್ತಾನೆ. ಬಡವರಿಗೋಸ್ಕರ ನ್ಯಾಯವಾಗಿ ತೀರ್ಪು ಮಾಡುವವನು, ಲೋಕದ ದೀನರಿಗೋಸ್ಕರ ಧರ್ಮವಾಗಿ ನಿರ್ಣಯಿಸುವವನು, ಜ್ಞಾನ ವಿವೇಕದಾಯಕ ಆತ್ಮವನ್ನು ಹೊಂದಿರುವಾತನು ಆಗಿದ್ದಾನೆ. ಇಷಯನ ಬುಡದಿಂದ ಒಡೆದು ಬಂದ ಚಿಗುರು ಮೆಸ್ಸೀಯನಾಗಿದ್ದಾನೆ, ಯೆಶಾಯ 9:6,7ರಲ್ಲಿರುವ ದೈವೀಕ ಶಿಶುವೇ ದಾವೀದದ ರಾಜ್ಯದಲ್ಲಿ ನಿತ್ಯ ಸಮಾಧಾನವನ್ನು ತಂದು ನೀತಿನ್ಯಾಯಗಳ ಮೂಲಕ ರಾಜ್ಯವನ್ನು ಸ್ಥಾಪಿಸುವವನಾಗಿದ್ದಾನೆ (ಯೆಶಾಯ 9:7). ಯೆಶಾಯ 42ರಲ್ಲಿ ಬರುವ ಸೇವಕನು ಸ್ಪಷ್ಟವಾಗಿ ಮೆಸ್ಸೀಯನೇ ಆಗಿದ್ದಾನೆ.

ಸದ್ಧರ್ಮವನ್ನು ಪ್ರಚುರಪಡಿಸುವ ಯೆಶಾಯ 42:1–7ರಲ್ಲಿರುವ ಸೇವಕನನ್ನು ಹೊಸಒಡಂಬಡಿಕೆಯು ಹೇಗೆ ಗುರುತುಹಿಡಿಯುತ್ತದೆ? (ಮತ್ತಾಯ 12:15–21).

ಮತ್ತಾಯ 12ನೇ ಅಧ್ಯಾಯವು ಯೆಶಾಯ 42ನೇ ಅಧ್ಯಾಯದ ವಚನಗಳನ್ನು ಉಲ್ಲೇಖಿಸುತ್ತದೆ ಮತ್ತು ನನಗೆ ಇಷ್ಟನು ಎಂದು ಹೇಳಿರುವ ದೇವರು ಪ್ರೀತಿಯ ಮಗನು, ಕೂಗಾಡದೆ ಆರ್ಭಟಿಸದೆ ಮಾಡುವ "**ರೋಗಗಳನ್ನು ಗುಣಪಡಿಸುವ**

**ಸೇವೆ**"ಗೆ ಈ ವಚನಗಳನ್ನು ಅನ್ವಯಿಸುತ್ತದೆ (ಮತ್ತಾಯ 3:16,17; ಮತ್ತಾಯ 17:5). ದೇವರು ತನ್ನ ಜನರೊಂದಿಗೆ ಮಾಡಿಕೊಂಡ ಒಡಂಬಡಿಕೆಯನ್ನು ಮರುಸ್ಥಾಪಿಸುವ ಕೆಲಸವನ್ನು ಯಾವನು ಮಾಡುವನೋ ಅವನೇ ಈತನು (ಯೆಶಾಯ 42:6, ದಾನಿ 9:27)

ಯೇಸು ಮತ್ತು ಆತನ ಶಿಷ್ಯರು ಜನರನ್ನು ಸೈತಾನನ ಹಿಡಿತದಿಂದ ಉಂಟಾಗಿದ್ದ ಬಾಧೆಗಳಿಂದ, ದುರಾತ್ಮಗಳ ಬಂಧನದಿಂದ, ಅಜ್ಞಾನದಿಂದ ಬಿಡಿಸಿ ಜನರಿಗೆ ನ್ಯಾಯವನ್ನು ಒದಗಿಸಿಕೊಟ್ಟರು (ಲೂಕ 10:19). ಹೊಸ ಒಡಂಬಡಿಕೆಯನ್ನು ಸ್ಥಿರಪಡಿಸುವುದಕ್ಕಾಗಿ ಯೇಸುಕ್ರಿಸ್ತನು ಮರಣ ಹೊಂದಿದನು (ಮತ್ತಾಯ 26:28) ಮತ್ತು ಈ ಲೋಕದ ಅಧಿಕಾರವನ್ನು ಕಸಿದುಕೊಂಡು ಸೈತಾನನನ್ನು ಸೋಲಿಸಿ ನ್ಯಾಯವನ್ನು ಸ್ಥಾಪಿಸಿದನು (ಯೋಹಾನ 12:31–33).

ಯೆಶಾಯ 42:1–4 ವಚನಗಳು ಕ್ರಿಸ್ತನನ್ನು ನಿರೂಪಿಸುತ್ತವೆ. ಯೇಸುಕ್ರಿಸ್ತನ ಜೀವನದ ಬಗ್ಗೆ ಆಲೋಚಿಸಲು ಸ್ವಲ್ಪ ಸಮಯವನ್ನು ವಿನಿಯೋಗಿಸಿರಿ. ಆತನ ಸೇವೆಯಲ್ಲಿರುವ ಯಾವ ನಿರ್ದಿಷ್ಟ ಗುಣಸ್ವಭಾವಗಳು ಪ್ರವಾದನೆಯನ್ನು ಕರಾರುವಕ್ಕಾಗಿ ನೆರವೇರಿಸಿವೆ? ಹಾಗೆಯೇ, ನಾವು ಸಹಾ ಇತರರಿಗೆ ಸೇವೆ ಮಾಡುವ ಬಗ್ಗೆ ಯಾವ ಪಾಠಗಳನ್ನು ಕಲಿತುಕೊಳ್ಳಬಹುದು?

**ಮಂಗಳವಾರ** **ಫೆಬ್ರವರಿ 23**

## ಪಾರಸೀಯನಾದ "ಮೆಸ್ಸೀಯ" (ಯೆಶಾಯ 44:26–45:6)

ಯೆಶಾಯ 44:26 ರಿಂದ 45:6ನೇ ವಚನಗಳಲ್ಲಿ ಬೆರಗುಗೊಳಿಸುವ ಎಂತಹ ಪ್ರವಾದನೆಯು ಕಾಣಿಸುತ್ತದೆ?

ಯೆಶಾಯನು ದೇವರ ಸೇವೆಯನ್ನು ಕ್ರಿ.ಪೂ.745ರಿಂದ ಕ್ರಿ.ಪೂ.685ರವರೆಗೆ ಮಾಡಿದನು. ಮೂಡಲಿನಿಂದ ಮತ್ತು ಬಡಗಲಿನಿಂದ ಒಬ್ಬನು ಬರುತ್ತಾನೆ. ಜನಾಂಗಗಳ ಮೇಲೆ ಆಕ್ರಮಣ ಮಾಡಿ ಅವರನ್ನು ಜೈಸುತ್ತಾನೆ (ಯೆಶಾಯ 41:2,3,25) ಎಂದು ಯೆಶಾಯನು ಉಲ್ಲೇಖಿಸುತ್ತಾನೆ. ಇದು ಯೆರೂಸಲೇಮಿಗೆ ಶುಭ ಸಮಾಚಾರವಾಗಿ ಸೂಚಿತವಾಗಿದೆ (ಯೆಶಾಯ 41:27). ಇವುಗಳ ನಂತರ ಯೆಶಾಯನು ಕೋರೆಷನ ವಿಷಯವಾಗಿ ಆತನ ಹೆಸರನ್ನು ಹಿಡಿದು

ಆತನು ಮಾಡುವ ಕಾರ್ಯಗಳ ಸಹಿತವಾಗಿ ನಿಖರವಾದ ಪ್ರವಾದನೆಯನ್ನು ನುಡಿದಿದ್ದಾನೆ. ಆತನು ಕ್ರಿ.ಪೂ.539ನೇ ವರ್ಷದಲ್ಲಿ ಬ್ಯಾಬಿಲೋನಿಗೆ ಪೂರ್ವದಿಂದಲೂ ಉತ್ತರದಿಂದಲೂ ಒಂದು ಮುತ್ತಿಗೆ ಹಾಕಿ ಅದನ್ನು ವಶಪಡಿಸಿಕೊಂಡನು. ಆತನು ಬ್ಯಾಬಿಲೋನಿನಲ್ಲಿ ಸೆರೆಯಾದ ಯೆಹೂದ್ಯರನ್ನು ಬಿಡುಗಡೆಗೊಳಿಸಿ ದೇವರ ಚಿತ್ತವನಂತೆ ನಡೆದುಕೊಂಡನು ಮತ್ತು ಯೆರೂಸಲೇಮಿನಲ್ಲಿ ಆಲಯವನ್ನು ಜೀರ್ಣೋದ್ಧಾರಮಾಡಲು ಅಧಿಕೃತವಾಗಿ ಆದೇಶ ನೀಡಿದನು (ಎಜ್ರನು 1ನೇ ಅಧ್ಯಾಯ).

ಈ ಪ್ರವಾದನೆಯ ಸ್ವರೂಪವನ್ನು ಯಥಾದೃಷ್ಟಿಯಿಟ್ಟು ನೋಡೋಣ. ಯೆಶಾಯನ ಮರಣಕ್ಕೂ ಅದರ ನಂತರ ಘಟಿಸಿದ ಬ್ಯಾಬಿಲೋನ್ ಪತನಕ್ಕೂ ಸುಮಾರು 146 ವರ್ಷಗಳ ಅಂತರವಿದೆ. ಆತನು ನುಡಿದ ಭವಿಷ್ಯವು ನೂರೈವತ್ತು ವರ್ಷಗಳ ನಂತರ ನಡೆಯುವ ಘಟನೆಯಾಗಿತ್ತು. ಇದು ಅಮೇರಿಕ ಸಂಯುಕ್ತ ಸಂಸ್ಥಾನದ ಪ್ರಪ್ರಥಮ ಅಧ್ಯಕ್ಷರಾದ ಜಾರ್ಜ್‌ವಾಷಿಂಗ್‌ಟನ್ (ಕ್ರಿ.ಶ.1789 ರಿಂದ 1797) ಡ್ವೈಟ್ ಐಸನ್‌ಹಾವರ್ ಎಂಬ ಹೆಸರಿನ ಸೇನಾ ದಂಡನಾಯಕನು ಕ್ರಿ.ಶ.1945 ಇಸ್ವಿಯಲ್ಲಿ ಯೂರೋಪ್ ಖಂಡವನ್ನು ವಿಮೋಚಿಸಲು ಸಹಾಯ ಮಾಡುತ್ತಾನೆಂದು ಭವಿಷ್ಯನುಡಿದಂತಿತ್ತು.

ಪಾರಸೀಯ ಚಕ್ರವರ್ತಿಯಾದ ಕೋರೇಷನು ನಡೆಸಿದ ಕೃತ್ಯಗಳು ನಾನಾ ಬಗೆಯ ಪುರಾತನ ಮೂಲಗಳಿಂದ ಸಮರ್ಪಕವಾಗಿ ದೃಢಪಡುತ್ತವೆ ಬ್ಯಾಬಿಲೋನಿನ ಕಾಲಾನುಕ್ರಮ ಚರಿತ್ರೆ, ಅವನೇ ಬರೆದ 'ಸೈರಸ್ ಸಿಲಿಂಡರ್' ಮತ್ತು ಸತ್ಯವೇದ (2 ಪೂ.ವೃ.36:22,23 ಮತ್ತು ಎಜ್ರ 1ನೇ ಅಧ್ಯಾಯ, ದಾನಿಯೇಲ 5ನೇ ಅಧ್ಯಾಯ, 6:28 ಮತ್ತು 10:1). ಈತನ ಬಗ್ಗೆ ಮಾಹಿತಿ ನೀಡುತ್ತವೆ, ಯೆಶಾಯನು ನುಡಿದ ಪ್ರವಾದನೆಯು ಅಕ್ಷರಶಃ ಸತ್ಯವಾಗಿತ್ತು. ಇದರಿಂದ, ನಿಜವಾದ ಪ್ರವಾದಿಗಳು ಭವಿಷ್ಯವನ್ನು ಅರಿತಿರುವ ದೇವರಿಂದ ಕರಾರುವಕ್ಕಾಗಿ ನಡೆಯುವ ಪ್ರವಾದನೆಗಳನ್ನು ಹೊಂದುತ್ತಾರೆಂದು ನಂಬುವವರ ನಂಬಿಕೆಯನ್ನು ದೃಢಪಡಿಸುತ್ತವೆ.

ಯಾಕೆ ದೇವರು ಕೋರೇಷನನ್ನು ತನ್ನ ಅಭಿಷಿಕ್ತನು ಎಂದು ಕರೆಯುತ್ತಾನೆ?

ಅಭಿಷಿಕ್ತ ಎಂಬುದರ ಇಬ್ರಿಯ ಪದದಿಂದ ನಮಗೆ ಸಿಗುವ ಪದವೇ ಮೆಸ್ಸೀಯ ಎಂಬುದು. ಹಳೆಯ ಒಡಂಬಡಿಕೆಯಲ್ಲಿ ಬೇರೆಲ್ಲಿಯಾದರೂ ಅದು ಮಹಾಯಾಜಕನಿಗೆ ಅನ್ವಯವಾಗುತ್ತದೆ (ಯಾ.ಕಾಂಡ 4:3,5,16; ಯಾ.ಕಾಂಡ 6:22). ಅಭಿಷಿಕ್ತನಾದ ಇಸ್ರಾಯೇಲ್ ಅರಸ ಅಥವಾ ದಾವೀದನ ರಾಜ್ಯವನ್ನು ಶಾಶ್ವತವಾಗಿ ಆಳುವವನು ಮತ್ತು ವಿಮೋಚಕನಾದ ಮೆಸ್ಸೀಯನು (ಕೀರ್ತನೆಗಳು 2:2, ದಾನಿ 9:25,26). ಯೆಶಾಯನ ದೃಷ್ಟಿಯಲ್ಲಿ ಪಾರಸೀಯ ರಾಜನಾದ ಕೋರೆಷನು ದೇವರಿಂದ ಕಳುಹಿಸಲ್ಪಡುತ್ತಾನೆ, ಆತನು ಇಸ್ರಾಯೇಲ್ಯರನ್ನು ಸೆರೆಯಿಂದ ಬಿಡಿಸುತ್ತಾನೆ. ಆತನು ವಿಶೇಷವಾದ ಮೆಸ್ಸೀಯನು ಯಾಕೆಂದರೆ ಕೋರೆಷನು ಇಸ್ರಾಯೇಲ್ಯನಲ್ಲ. ಕೋರೆಷನು ಮೆಸ್ಸೀಯನು ಮಾಡುವ ಕೆಲಸವನ್ನು ಮಾಡುವುದರಿಂದ, ದೇವರ ವೈರಿಗಳನ್ನು ಸೋಲಿಸಿ, ಆತನ ಜನರನ್ನು ಸೆರೆಯಿಂದ ಬಿಡಿಸುತ್ತಾನೆ, ಆದರೆ ಆತನು ಮೆಸ್ಸೀಯನಂತೆಯೇ ಇರುವುದಿಲ್ಲ. ಯಾಕೆಂದರೆ ಆತನು (ಕೋರೆಷನು) ದಾವೀದನ ವಂಶಕ್ಕೆ ಸೇರಿದವನಲ್ಲ.

ಕೋರೆಷನನ್ನು ಮುಂಚಿತವಾಗಿಯೇ ದೇವರು ಮುಂತಿಳಿಸಿರುವುದರಿಂದ ಆತನೊಬ್ಬನಿಗೆ ಮಾತ್ರ ಭವಿಷ್ಯ ಗೊತ್ತಿರುತ್ತದೆ ಎಂಬುದನ್ನು ಮತ್ತು ಆತನ ದೈವೀಕತೆಯ ವೈಶಿಷ್ಟ್ಯವನ್ನು ಸಾಬೀತುಪಡಿಸಿದ್ದಾನೆ (ಯೆಶಾಯ 41:4, 21–23, 26–28 ಮತ್ತು ಯೆಶಾಯ 44:26). ಆತನು ಕೋರೆಷನಿಗೆ ಅನುಗ್ರಹ ಮಾಡಿದನು "**ನಿನ್ನ ಹೆಸರು ಹಿಡಿದು ಕರೆಯುವ ನಾನು ಯೆಹೋವನು, ಇಸ್ರಾಯೇಲ್ಯರ ದೇವರು ಎಂದು ನೀನು ತಿಳಿದುಕೊಳ್ಳುವ ಹಾಗೆ ಕತ್ತಲಲ್ಲಿ ಬಚ್ಚಿಟ್ಟಿರುವ ಆಸ್ತಿಪಾಸ್ತಿಯನ್ನೂ ಗುಪ್ತಸ್ಥಳದಲ್ಲಿ ಮರೆಮಾಡಿರುವ ನಿಧಿನಿಕ್ಷೇಪವನ್ನು ನಿನಗೆ ಕೊಡುವೆನು**" (ಯೆಶಾಯ 45:3).

ಸತ್ಯವೇದದಲ್ಲಿರುವ ಮುಂತಿಳಿಸಿರುವಂತೆ ನಡೆದಿರುವ ಇನ್ನಿತರ ಪ್ರವಾದನೆಗಳ ಬಗ್ಗೆ ಆಲೋಚಿಸಿರಿ (ಉದಾಹರಣೆಗೆ ಕಡೆಯ ರಾಜ್ಯವನ್ನು ಹೊರತುಪಡಿಸಿ ದಾನಿಯೇಲನು ಹೇಳಿರುವ ಎಲ್ಲಾ ರಾಜ್ಯಗಳು–ದಾನಿಯೇಲ 2ನೇ ಅಧ್ಯಾಯ, ದಾನಿಯೇಲ 7ನೇ ಅಧ್ಯಾಯ ಅಥವಾ ದಾನಿಯೇಲ 9:24–27ರಲ್ಲಿರುವ ಯೇಸುಕ್ರಿಸ್ತನ ಕಾಲ). ವೈಯಕ್ತಿಕವಾಗಿ ಈ ಪ್ರವಾದನೆಗಳು ನಮಗೆ ಎಂಥಾ ನಿರೀಕ್ಷೆಯನ್ನು ಕೊಡುತ್ತವೆ?

**ಬುಧವಾರ** **ಫೆಬ್ರವರಿ 24**

## ಮುಂಚಿತವಾದ ನಿರೀಕ್ಷೆ

ಯೆಶಾಯನು ನಿಖರವಾಗಿ ಕೋರೆಷನನ್ನು ಅವನ ಹೆಸರಿನಿಂದ ಮುಂತಿಳಿಸಿರುವ (ಭವಿಷ್ಯ ನುಡಿದಿರುವುದು) ಸಂಗತಿಯಿಂದ ಪ್ರವಾದಿಗಳು ದೇವರ ಸಹಾಯದಿಂದ ಪ್ರವಾದನೆಯನ್ನು ನುಡಿಯುತ್ತಾರೆ ಎಂಬುದನ್ನು ನಂಬದಿರುವ ಜನರು ತಲ್ಲಣಗೊಳ್ಳುತ್ತಾರೆ. ಇದನ್ನು ಸರಿದೂಗಿಸಲು ಅವರು "ಎರಡನೆ ಯೆಶಾಯ" ಎಂಬ ವಾದವನ್ನು ಅಂಗೀಕರಿಸುತ್ತಾರೆ. ಕೋರೆಷನ ಕಾಲದಲ್ಲಿ ಜೀವಿಸುತ್ತಿದ್ದ ಮತ್ತೊಬ್ಬ ಪ್ರವಾದಿಯು ಯೆಶಾಯ ಗ್ರಂಥದ 40 ರಿಂದ 60 ಅಧ್ಯಾಯಗಳನ್ನು ಬರೆದನೆಂಬುದಾಗಿ ಬಗೆಯುತ್ತಾರೆ. ಹಾಗಾಗಿ ಯೆಶಾಯನ ಗ್ರಂಥವನ್ನು ಎರಡು ಭಾಗಗಳಾಗಿ ವಿಂಗಡಿಸಿರುವಂತೆಯೇ ಪ್ರವಾದಿಯಾದ ಯೆಶಾಯನನ್ನೂ ಎರಡು ಭಾಗವಾಗಿ ಗರಗಸದಿಂದ ಕೊಯ್ದು ಹಾಕಿದರು ಎಂದು ಸಾಂಪ್ರದಾಯಕವಾಗಿ ತಿಳಿದುಕೊಂಡಿದ್ದೇವೆ (ಇಬ್ರಿಯ 11:37).

ಆದಾಗ್ಯೂ, ಎರಡನೇ ಯೆಶಾಯನು ಇದ್ದನು ಎಂಬುದಕ್ಕೆ ಯಾವುದೇ ಚಾರಿತ್ರಿಕ ಪುರಾವೆಯಿಲ್ಲ. ಒಂದುವೇಳೆ ಇದ್ದಿದ್ದಾದರೆ ಸತ್ಯವೇದವು ಆತನ ಬಗ್ಗೆ ಹೇಳದಿರುವುದು ಬಹಳ ವಿಚಿತ್ರ ಸಂಗತಿಯಾಗುತ್ತದೆ, ಯಾಕೆಂದರೆ ಅವನ ಸಂದೇಶವು ಬಹಳ ಮುಖ್ಯವಾದದ್ದು ಮತ್ತು ಆತನ ಸಾಹಿತ್ಯಶೈಲಿಯು ಅಸಾಧಾರಣವಾದ್ದು ಆಗಿದೆ. ಬಹಳ ಹಳೆಯ ಕೈಬರಹಗಳಲ್ಲೂ ಯೆಶಾಯ ಗ್ರಂಥದ ಕುಮ್ರಾನ್ ಸುರಳಿಗಳಲ್ಲಿಯೂ 39 ಮತ್ತು 40ನೇ ಅಧ್ಯಾಯಗಳ ನಡುವೆ ಹೊಸಕೃತಿಕಾರನ ಬದಲಾವಣೆ ತೋರಿಸುವ ಯಾವುದೇ ಭಿನ್ನತೆ ಕಾಣುವುದಿಲ್ಲ. ಯೆಶಾಯನ ಗ್ರಂಥದ ಪರ್ಯಂತ ಅದರಲ್ಲಿರುವ ಮೂಲಸಂದೇಶವು ಸ್ಥಿರತೆಯಿಂದ ಕೂಡಿದೆ. ಇತರೆ ಶಕ್ತಿಗಳನ್ನು ಬಿಟ್ಟು ಸತ್ಯದೇವರ ಮೇಲೆ ಮತ್ತು ಆತನ ಅಭಿಷಿಕ್ತನಾದ ವಿಮೋಚಕ (ಮೆಸ್ಸೀಯ)ನ ಮೇಲೆ ಭರವಸವಿಡಿರಿ.

ಅಶ್ಶೂರರ ಕಾಲಾವಧಿಯನ್ನು ಒಳಗೊಂಡಿರುವ ಯೆಶಾಯ 1 ರಿಂದ 39 ಅಧ್ಯಾಯಗಳ ಮೇಲಿನ ಗಮನವು ಬ್ಯಾಬಿಲೋನಿಯರ ಕಾಲವನ್ನು ವಿವರಿಸುವ

40ನೇ ಅಧ್ಯಾಯದಿಂದ ಹಿಡಿದು ಉಳಿದೆಲ್ಲಾ ಅಧ್ಯಾಯಗಳ ಮೇಲೆ ವರ್ಗಾವಣೆಯಾಗುವುದನ್ನು ವಿದ್ವಾಂಸರು ಸಮರ್ಪಕವಾಗಿ ಗುರುತಿಸುತ್ತಾರೆ. ಆದರೆ ಯೆಶಾಯ 13, 14 ಮತ್ತು 39ನೇ ಅಧ್ಯಾಯಗಳಲ್ಲಿಯೇ ಬ್ಯಾಬಿಲೋನಿನ ಮುತ್ತಿಗೆಯ ಬಗ್ಗೆ ಸುಳಿವು ನೀಡಿರುವುದನ್ನು ನಾವು ಕಾಣುತ್ತೇವೆ. ಯೆಶಾಯ 1 ರಿಂದ 39 ಅಧ್ಯಾಯಗಳು ದೇವರ ನ್ಯಾಯತೀರ್ಪಿಗೆ ಒತ್ತುಕೊಡುತ್ತವೆ. ಹಾಗೆಯೇ 40–66 ಅಧ್ಯಾಯಗಳು ದೇವರ ಸಂತೈಸುವಿಕೆಗೆ ಒತ್ತುಕೊಡುತ್ತವೆ ಎಂಬುದು ಸತ್ಯವಾದ ಸಂಗತಿಯಾಗಿದೆ. ಆದರೆ ಆರಂಭದ ಅಧ್ಯಾಯಗಳಲ್ಲೂ ದೇವರ ಸಂತೈಸುವಿಕೆ ಮತ್ತು ಭರವಸೆಗಳು ಹೇರಳವಾಗಿವೆ ಅಂತೆಯೇ ನಂತರದ ಅಧ್ಯಾಯಗಳ ವಚನಗಳು ಉದಾಹರಣೆಗೆ 42:18–25; ಯೆಶಾಯ 43:22–28 ಮತ್ತು ಯೆಶಾಯ 48:1–11 ದೇವರು ಯೆಹೂದದ ಮೇಲೆ ನ್ಯಾಯತೀರ್ಪು ಮಾಡಿ ಅದನ್ನು ತಿರಸ್ಕರಿಸಿರುವುದನ್ನು ಹೇಳುತ್ತವೆ. ಸಂಗತಿಯೇನೆಂದರೆ ಯೆಶಾಯನು ಮುಂತಿಳಿಸಿರುವ ಭವಿಷ್ಯದ ಸಂತೈಸುವಿಕೆಯ ಕಾಲದ ನಡುವೆ ಕಷ್ಟಸಂಕಟಗಳಿಂದ ಬಾಧೆಪಡುವುದನ್ನು ಸಹ ಸೂಚಿಸುತ್ತದೆ.

ಜನರ ಪಾಪಕೃತ್ಯಗಳಿಂದ ದೇಶದ ಜನರು ಭಯಂಕರವಾದ ಆಪತ್ತು ವಿಪತ್ತುಗಳನ್ನು ಎದುರಿಸುತ್ತಿರುವಾಗಲೂ ಅವರಲ್ಲಿ ಕೆಲವರು ತಮ್ಮ ನಿರೀಕ್ಷೆಯನ್ನು ಬಿಟ್ಟುಬಿಡಲಿಲ್ಲ. ಅವರು ಯಾಜಕಕಾಂಡ 26:40 ರಿಂದ 45ನೇ ವಚನಗಳಲ್ಲಿರುವ ದೇವರ ವಾಗ್ದಾನಗಳಿಗೆ ಗಟ್ಟಿಯಾಗಿ ಅಂಟಿಕೊಳ್ಳುವರು. ಮೇಲೆ ಹೇಳಿರುವ ಯಾಜಕಕಾಂಡದ ವಚನಗಳನ್ನು ಎಚ್ಚರಿಕೆಯಿಂದ ಓದಿರಿ. ನೀವು ನಿಮ್ಮನ್ನು ಬ್ಯಾಬಿಲೋನಿನಿಂದ ಸೋತುಹೋದ ಮೇಲೆ ಬದುಕುಳಿದ ಯೆಹೂದ್ಯರ ಸ್ಥಾನದಲ್ಲಿರಿಸಿಕೊಳ್ಳಿರಿ. ಆವಾಗ ಮೇಲಿನ ವಚನಗಳಿಂದ ನಿಮಗೆ ಯಾವ ಭರವಸೆ ಸಿಗುತ್ತವೆ?

ಮತ್ತೊಮ್ಮೆ ಯಾಜಕಕಾಂಡ 26:40–45 ವಚನಗಳನ್ನು ಓದಿರಿ. ಈ ವಚನಗಳಲ್ಲಿ ಆತ್ಮೀಕವಾದ ಯಾವ ನಿಯಮಗಳು ಕೆಲಸ ಮಾಡುತ್ತವೆಯೆಂದು ನೋಡುವಿರಿ? ನಮ್ಮ ಸ್ವಂತ ಜೀವಿತದಲ್ಲಿ ಈ ನಿಯಮಗಳು ಹೇಗೆ ಪ್ರವರ್ತಿಸುತ್ತವೆ?

**ಗುರುವಾರ** **ಫೆಬ್ರವರಿ 25**

## ಬಾಧೆಪಡುತ್ತಿರುವ ಸಂವೇದನೆಯುಳ್ಳ ಒಬ್ಬ ಸೇವಕ

ಯೆಶಾಯ 49:1–12 ವಚನಗಳಲ್ಲಿರುವ ದೇವರ ಸೇವಕನಾರು?

ದೇವರು ಆತನು ಹುಟ್ಟುವ ಮೊದಲೆ ಆತನನ್ನು ಕರೆದನು ಮತ್ತು ಆತನಿಗೆ ಹೆಸರಿಟ್ಟನು, ಆತನ ಬಾಯನ್ನು ಹದವಾದ ಖಡ್ಗವನ್ನಾಗಿ ಮಾಡಿ ಆತನಲ್ಲಿ ಮಹಿಮೆ ಹೊಂದಿಕೊಳ್ಳುವನು. ದೇವರು ತನ್ನ ಸೇವಕನ ಮೂಲಕ ಇಸ್ರಾಯೇಲ್ ಜನಾಂಗವನ್ನು ಹಿಂದಿರುಗಿ ತನ್ನ ಬಳಿಗೆ ಕರೆತಂದು ಲೋಕದ ಸಮಸ್ತ ಜನಾಂಗಗಳಿಗೆ ರಕ್ಷಣೆಯ ಬೆಳಕಾಗಿರುವಂತೆ ಮಾಡುತ್ತಾನೆ. ಯೆಶಾಯ 42ನೇ ಅಧ್ಯಾಯವು ದೇವರ ಸೇವಕನನ್ನು ಮೆಸ್ಸೀಯನೆಂದು ಗುರುತಿಸುತ್ತದೆ. ಇದರಲ್ಲಿರುವ ವಿವರಣೆಯು ಬಹಳವಾಗಿ 49:1–2ರಲ್ಲಿರುವ ವಿವರಣೆಯೊಂದಿಗೆ ಒಂದಕ್ಕೊಂದು ಬೆಸೆದುಕೊಳ್ಳುತ್ತಿವೆ. ಸೇವಕನಲ್ಲಿರುವ ಗುಣಲಕ್ಷಣಗಳನ್ನು ಹೊಸ ಒಡಂಬಡಿಕೆಯು ಯೇಸುಕ್ರಿಸ್ತನಲ್ಲಿ ಕಂಡುಕೊಳ್ಳುತ್ತದೆ (ಮತ್ತಾಯ 1:21, ಯೋಹಾನ 8:12, ಯೋಹಾನ 17:1–5, ಪ್ರಕ 1:16, ಪ್ರಕ 2:16, ಪ್ರಕ 19:15).

ಈ ಸೇವಕನು "ಮೆಸ್ಸೀಯ"ನಾಗಿದ್ದ ಪಕ್ಷದಲ್ಲಿ ದೇವರು ಈತನನ್ನು "ಇಸ್ರಾಯೇಲೇ' ಎಂದು ಯಾಕೆ ಕರೆಯುತ್ತಾನೆ? (ಯೆಶಾಯ 49:3).

ಇದಕ್ಕೂ ಮುಂಚೆ ಯೆಶಾಯ ಗ್ರಂಥದ ಇದೇ ವಿಭಾಗದಲ್ಲಿ ಇಸ್ರಾಯೇಲೇ, ಯಾಕೋಬೇ ಎಂದು ದೇವರ ಸೇವಕನನ್ನು ಕರೆದಿರುವುದು ಆ ಜನಾಂಗಕ್ಕೆ ಸೂಚಿತವಾಗಿದೆ. ಆದರೆ 49ನೇ ಅಧ್ಯಾಯದಲ್ಲಿ 'ಇಸ್ರಾಯೇಲ್' ಎಂಬ ಪದವು ಜನಾಂಗವನ್ನು ಮರುಸ್ಥಾಪಿಸುವ ಒಬ್ಬ ವ್ಯಕ್ತಿಗೆ ಅನ್ವಯವಾಗುತ್ತದೆ (ಇಲ್ಲಿ ಯಾಕೋಬೇ ಎಂಬ ಸಂಬೋಧನೆ ಜೊತೆಯಾಗಿ ಬಂದಿಲ್ಲ) (ಯೆಶಾಯ 49:5).

ಒಬ್ಬ ವ್ಯಕ್ತಿಯು ಇಡೀ ಜನಾಂಗದ ವಿಫಲತೆಯನ್ನು ಸಮರ್ಪಕವಾಗಿ ಪ್ರತಿನಿಧಿಸುವುದರಿಂದ 'ಇಸ್ರಾಯೇಲ್' ಎಂಬ ಪದವನ್ನು ವ್ಯಕ್ತಿಯ ಹೆಸರಂತೆ ಬಳಸಲಾಗಿದೆ (ಯೆಶಾಯ 48:1).

ಇಲ್ಲಿ ಹೊಸದಾಗಿರುವ ಯಾವ ಅಂಶವು ಕಾಣಿಸಿಕೊಳ್ಳುತ್ತದೆ? (ಯೆಶಾಯ 49:4,7).

'ಸೇವಕನು' ಮಾಡುವ ಕೆಲಸದಲ್ಲಿರುವ ಕಷ್ಟವನ್ನು ಇಲ್ಲಿ ಮೊದಲ ಸಲ ಪ್ರಸ್ತಾಪಿಸುತ್ತದೆ ನನ್ನ ಪ್ರಯಾಸವು ವ್ಯರ್ಥ, ನನ್ನ ಶಕ್ತಿಯನ್ನೆಲ್ಲಾ ವ್ರಯ ಮಾಡಿದ್ದು ಹಾಳೇ (ಯೆಶಾಯ 49:4), ಇದೇ ಆಲೋಚನೆಯು ದಾನಿ 9:26ರಲ್ಲಿಯೂ ಪ್ರತಿಧ್ವನಿಸುತ್ತದೆ. "ಅಭಿಷಿಕ್ತನೊಬ್ಬನು ಛೇದಿಸಲ್ಪಡುವನು; ಅವನಿಗೆ ಏನೂ ಇರದು. "ಆದರೂ ನನ್ನ ನ್ಯಾಯವು ಯೆಹೋವನಲ್ಲಿದೆ, ನನಗೆ ಲಾಭವು ನನ್ನ ದೇವರಿಂದಲೇ ಆಗುವುದು ಅಂದುಕೊಂಡನು" (ಯೆಶಾಯ 49:4). "ಹಾಗಾಗಿ, ನಮ್ಮ ಹಾಗೆ ಶೋಧಿಸಲ್ಪಟ್ಟ ಮತ್ತು ಪೂರ್ಣವಾದ ನಂಬಿಕೆಯ ದಾರಿಗೆ ಕರ್ತೃವಾಗಿ ತನ್ನನ್ನು ಸಾಬೀತುಪಡಿಸಿಕೊಂಡ ಒಬ್ಬ ಮಾನವನ ನಿಜಸ್ವಭಾವವುಳ್ಳ ಏನೂ ಪ್ರಯೋಜನಯಿಲ್ಲವೆಂದು ಕಾಣುವ ಸಂದರ್ಭದಲ್ಲೂ ನಿಜವಾದ ನಂಬಿಕೆಯಿಂದ ನನ್ನ ದೇವರೇ ಎಂದು ಕರೆಯಬಲ್ಲವನಾಗಿರುವ ಸೇವಕನನ್ನು ಯೆಶಾಯನು ಮುಂಗಾಣುತ್ತಾನೆ" - J. Alec Motyer ರವರು The prophecy of Isaiah ಯ 387 ಪುಟದಲ್ಲಿ ಹೇಳಿರುವ ಅಭಿಪ್ರಾಯ.

ಯೆಶಾಯ 49:7ರಲ್ಲಿ ಹೇಳಿರುವುದು ನಮ್ಮನ್ನು ಬೆಚ್ಚಿಬೀಳಿಸುತ್ತದೆ. "ಮನಃಪೂರ್ವಕವಾಗಿ ತಿರಸ್ಕರಿಸಲ್ಪಟ್ಟವನೂ ಅನ್ಯಜನಾಂಗಕ್ಕೆ ಅಸಹ್ಯನೂ ಜನದೊಡೆಯರ ಸೇವಕನೂ ಆದವನಿಗೆ ಇಸ್ರಾಯೇಲಿನ ವಿಮೋಚಕನೂ ಸದಮಲಸ್ವಾಮಿಯೂ ಆದ ಯೆಹೋವನು ಹೀಗೆ ಹೇಳುತ್ತಾನೆ. ಯೆಹೋವನ ಪ್ರಾಮಾಣಿಕತೆಯುನ್ನೂ ಇಸ್ರಾಯೇಲಿನ ಸದಮಲಸ್ವಾಮಿ ನಿನ್ನನ್ನು ಪರಿಗ್ರಹಿಸಿರುವುದನ್ನು ಅರಸನು ನೋಡಿ ಎದ್ದು ನಿಲ್ಲುವರು. ಅಧಿಪತಿಗಳು ಅಡ್ಡಬೀಳುವರು".

ಯೇಸುಕ್ರಿಸ್ತನ ಸೇವಾಕಾರ್ಯವನ್ನು ನೋಡಿರಿ. ಆರಂಭದಿಂದ ಮುಕ್ತಾಯದವರಿಗೂ ಆತನನ್ನು ಅಧೈರ್ಯಪಡಿಸುವ ಕಾರಣಗಳಿಲ್ಲವೆ? ಆದಾಗ್ಯೂ ಆತನು ಹೊರಗಿನ ತೋರಿಕೆಗಳಿಂದ ವಿಚಲಿತನಾಗದೆ ನಂಬಿಗಸ್ತನಾಗಿಯೇ ಉಳಿದುಕೊಂಡನು. ನಾವು ಕೂಡ ಹೊರಗಿನ ತೋರಿಕೆಗಳು ಏನೇ ಇದ್ದರೂ ಆತನ ಹಾಗೆಯೇ ನಡೆದುಕೊಳ್ಳುವುದು ಹೇಗೆ?

**ಶುಕ್ರವಾರ** **ಫೆಬ್ರವರಿ 26**

**ಹೆಚ್ಚಿನ ಚಿಂತನೆ :** ಎಲೆನ್ ಜಿ ವೈಟಮ್ಮನವರ ದಿ ಡಿಸೈರ್ ಆಫ್ ಏಜಸ್ ಪುಸ್ತಕದಲ್ಲಿ `At Capernum' ಅಧ್ಯಾಯದಲ್ಲಿ ಪುಟ 252 ರಿಂದ 261 ರವರೆಗೆ ಯೇಸುಕ್ರಿಸ್ತನ ಸ್ವಸ್ಥತೆ ಮತ್ತು ಬೋಧನೆ ಸೇವೆಯ ಬಗ್ಗೆ ಇರುವ ವಿವರಣೆಯನ್ನು ಓದಿರಿ.

ಆತ್ಮಗಳನ್ನು ಗೆಲ್ಲುವ ಕೆಲಸಕ್ಕೆ ಸಮಯೋಚಿತವಾದ ಪ್ರಜ್ಞೆ ಮತ್ತು ಬುದ್ಧಿಯು ಅಗತ್ಯವಾಗಿದೆ. ರಕ್ಷಕನು ಎಂದಿಗೂ ಸತ್ಯವನ್ನು ಅದುಮಿಡದೆ ಅದನ್ನು ಪ್ರೀತಿಯಿಂದ ತಿಳಿಸಿದನು. ಜನರೊಂದಿಗೆ ತಾನು ವ್ಯವಹರಿಸುವಾಗ ಯಾವಾಗಲೂ ಪರಹಿತ ಚಿಂತಕನಾಗಿ, ದಯಾಶೀಲನಾಗಿ ಸಮಯೋಚಿತ ಪ್ರಜ್ಞೆಯಿಂದ ವರ್ತಿಸುತ್ತಿದ್ದನು. ಆತನೂ ಎಂದಿಗೂ ಅಸಭ್ಯವಾಗಿ ನಡೆದುಕೊಳ್ಳಲಿಲ್ಲ, ಮನನೋಯಿಸುವ ಮಾತುಗಳನ್ನಾಡಲಿಲ್ಲ, ಸೂಕ್ಷ್ಮಭಾವನೆಗಳುಳ್ಳವರಿಗೆ ಅನಾವಶ್ಯಕವಾದ ನೋವುಂಟು ಮಾಡಲಿಲ್ಲ. ಆತನು ಮನುಷ್ಯನ ಬಲಹೀನತೆಗಳನ್ನು ನಿರಾಕರಿಸಲಿಲ್ಲ. ಆತನು ನಿರ್ಭಯದಿಂದ ಕಪಟತನವನ್ನು, ಅಪನಂಬಿಕೆಯನ್ನು ಮತ್ತು ದುರಾಚಾರವನ್ನು ಸಾರ್ವಜನಿಕವಾಗಿ ಜರಿದನು, ಆತನು ಹಾಗೆ ನಿಷ್ಠುರವಾಗಿ ಖಂಡಿಸುವಾಗ ಅವನ ಸ್ವರವು ಗದ್ಗದಿತವಾಗಿರುತ್ತಿತ್ತು. ಆತನು ಸತ್ಯವನ್ನು ಕ್ರೂರಪಡಿಸಲಿಲ್ಲ. ಆದರೆ ಮಾನವಕುಲಕ್ಕೆ ಅಗಾಧವಾದ ಕೋಮಲತೆಯನ್ನು (ಸೌಮ್ಯವನ್ನು) ವ್ಯಕ್ತಪಡಿಸಿದನು, ಆತನ ದೃಷ್ಟಿಯಲ್ಲಿ ಪ್ರತಿಯೊಂದು ಆತ್ಮವು ಅಮೂಲ್ಯವಾಗಿತ್ತು. ಆತನು ದೈವೀಕಗಾಂಭೀರ್ಯವುಳ್ಳವನಾಗಿದ್ದನು. ಆದಾಗ್ಯೂ ಅತಿಕೋಮಲವಾದ ಕನಿಕರದಿಂದ ದೀನನಾಗಿದ್ದನು ಮತ್ತು ದೈವಕುಟುಂಬದ ಪ್ರತಿಸದಸ್ಯನನ್ನು ಗೌರವಿಸುವವನಾಗಿದ್ದನು. ಪ್ರತಿಯೊಂದು ಆತ್ಮವು ತನ್ನಿಂದ ರಕ್ಷಣೆಯಾಗಬೇಕೆಂದು ಎಲ್ಲರನ್ನೂ ಕಂಡುಕೊಂಡಿದ್ದನು" – ಎಲೆನ್ ಜಿ ವೈಟಮ್ಮನವರ ಗಾಸ್ಪೆಲ್ ವರ್ಕರ್ಸ್ 117ನೇ ಪುಟ.

## ಚರ್ಚಿಸಬೇಕಾದ ಪ್ರಶ್ನೆಗಳು

1. ಒಂದು ತರಗತಿಯಾಗಿ ಯೇಸುಕ್ರಿಸ್ತನು ಇತರರಿಗೆ ಹೇಗೆ ಸೇವೆ ಮಾಡಿದನು ಎಂಬುದರ ಬಗ್ಗೆ ಎಲೆನ್ ಜಿ ವೈಟಮ್ಮನವರು ಮೇಲೆ ಬರೆದಿರುವುದನ್ನು

ಓದಿರಿ. ಇದರಲ್ಲಿರುವ ತತ್ವಗಳನ್ನು (ನಿಯಮಗಳನ್ನು) ಚರ್ಚಿಸಿರಿ ಮತ್ತು ತರಗತಿಯಾಗಿ ನಿಮ್ಮ ಸ್ವಂತ ಸಭೆಯು ಇವುಗಳನ್ನು ಹೇಗೆ ಒಟ್ಟಾಗಿ ಪ್ರತಿಬಿಂಬಿಸುತ್ತಿದೆ ಎಂಬುದನ್ನು ಚರ್ಚಿಸಿರಿ.

2. ಜಜ್ಜಲ್ಪಟ್ಟ ದಂಟನ್ನು ಅಥವಾ ಮಂದವಾಗಿ ಉರಿಯುತ್ತಿರುವ ದೀಪದ ಬತ್ತಿಯನ್ನು ನೀವು ಬಲ್ಲಿರಾ (ಯೆಶಾಯ 42:3)? ಹಾಗಾದರೆ ಆ ದಂಟನ್ನು ಮುರಿಯದ ಹಾಗೆ ಮತ್ತು ಆ ಉರಿಯುತ್ತಿರುವ ಬತ್ತಿಯು ನಂದಿಹೋಗದ ಹಾಗೆ ಆ ವ್ಯಕ್ತಿಗೆ ಹೇಗೆ ಸಹಾಯ ಮಾಡುವಿರಿ? ಅಂಥವರನ್ನು ನೀವು ಯಾವ ರೀತಿಯಲ್ಲಿ ಕ್ರಿಸ್ತನ ಕಡೆಗೆ ನಡೆಸುವಿರಿ? ಅವರ ದೈನಂದಿನ ಜೀವಿತದಲ್ಲಿ ಅವರಿಗೆ ಅಗತ್ಯವಾದ ಸ್ವಸ್ಥತೆ ಮತ್ತು ನೆರವು ದೊರಕುವಂತಾಗಲು ಅವರಿಗೆ ಏನೆಂದು ಹೇಳುತ್ತೀರಿ?

3. ಯೆಶಾಯನಂತೆ ಭವಿಷ್ಯವನ್ನು ನುಡಿಯಲಾರದ ಹೊರಗಿನ ಜನರು ಯೆಶಾಯನ ಗ್ರಂಥವನ್ನು ಇಬ್ಬರು ಬರೆದಿದ್ದಾರೆಂದು ವಾದ ಮಾಡುತ್ತಾರೆ. ಈ ವಾರದಲ್ಲಿರುವ ಮೂಲಭೂತವಾದ ಸಮಸ್ಯೆಯೇನು? ಕ್ರೈಸ್ತರಾದ ನಾವು ಯಾಕೆ ಈ ಪೂರ್ವಸಿದ್ಧಾಂತವನ್ನು ಸಂಪೂರ್ಣವಾಗಿ ನಿರಾಕರಿಸಬೇಕು?

**ಸಾರಾಂಶ:** ವಿಮೋಚನೆಯು ಆಗಬೇಕಾದರೆ ಒಬ್ಬ ವಿಮೋಚಕನು ಬೇಕು. ದೇವರ ಜನಾಂಗವು ಇಬ್ಬರು ವಿಮೋಚಕರಿಂದ ಬಿಡುಗಡೆ ಹೊಂದುತ್ತದೆ. ಬ್ಯಾಬಿಲೋನಿನಲ್ಲಿ ಸೆರೆಯಾದವರನ್ನು ಕೋರೆಷನು ಸೆರೆಯಾಳುಗಳನ್ನು ಬಿಡಿಸಿ ಸ್ವತಂತ್ರಗೊಳಿಸಿದನು. ಇವನು ಮೊದಲನೆಯವನು ಮತ್ತೊಬ್ಬನು ಹೆಸರಿಲ್ಲದ (ಅನಾಮಧೇಯ) ದೇವರ ಸೇವಕನು ಇವನೇ ಮೆಸ್ಸೀಯನೆಂಬುದಾಗಿ ನಾವು ಮುಂದುವರಿದಂತೆ ಗೊತ್ತಾಗುತ್ತದೆ. ಈತನು ನ್ಯಾಯವನ್ನು (ಸದ್ಧರ್ಮ) ಪುನರ್‌ಸ್ಥಾಪಿಸುವವನು ಮತ್ತು ರಕ್ಷಿಸಲ್ಪಟ್ಟ ಜನರನ್ನು ದೇವರಿಗೆ ಹಿಂದಿರುಗಿಸುವವನು ಆಗಿದ್ದಾನೆ. ಈತನೇ ಯೇಸುಕ್ರಿಸ್ತನು.